ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒಟ್ಟು ಎಷ್ಟು ಬಳಕೆಯಲ್ಲಿಲ್ಲದ ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ;

ಇ) ಎಷ್ಟು ಕೊಳವೆ ಬಾವಿಗಳಿಗೆ ಮುಚ್ಚಳ ಹಾಕಲಾಗಿದೆ? (ವಿವರ ನೀಡುವುದು)

ಈ) ಮುಚ್ಚಳ ಹಾಕಲು ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ? (2010–11 ಮತ್ತು 2011–12ರ ಸಾಲಿನ ಜಿಲ್ಲಾವಾರು ವಿವರಗಳನ್ನು ನೀಡುವುದು)

ಉತ್ತರಗಳು:

ಅ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಬಳಕೆಯಲ್ಲಿಲ್ಲದ ನಿರುಪಯುಕ್ತ ಕೊಳವೆ ಬಾವಿಗಳನ್ನು ಮುಚ್ಚಲು ಸರ್ಕಾರದಿಂದ ಕಟ್ಟಾಜ್ಞೆ ಮಾಡಲಾಗಿದೆ.

ಆ) ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಲಾಗಿರುವ ನಿರುಪಯುಕ್ತ ಕೆಳವೆ ಬಾವಿಗಳನ್ನು ಮುಚ್ಚಿಸಲು ಪಂಚಾಯತ್ ರಾಜ್ ಸಂಸ್ಥೆಗಳು ಕ್ರಮವಹಿಸಿದ್ದು, ಇವುಗಳ ಸಂಪೂರ್ಣ ಜಿಲ್ಲಾವಾರು ವಿವರಗಳನ್ನು ಕ್ರೋಢೀಕರಿಸಲಾಗುತ್ತಿದೆ.

ದೇವಸ್ಥಾನಗಳಿಗೆ ನೀಡುವ ದೇಣಿಗೆಗಳ ವಿವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 146 (126)

ಸದಸ್ಯರ ಹೆಸರು : ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ)

ಉತ್ತರಿಸುವ ಸಚಿವರು : ವಿ.ಎಸ್. ಆಚಾರ್ಯ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

ಪ್ರಶ್ನೆಗಳು:

ಅ) ಮುಜರಾಯಿ ಇಲಾಖೆಯ ಅಧಿನದಲ್ಲಿರುವ ದೇವಸ್ಥಾನಗಳಿಗೆ ಸರ್ಕಾರ ಮತ್ತು ದಾನಿಗಳು ನೀಡುವ ವಸ್ತು ಅಥವಾ ನಗದು ರೂಪದ ದೇಣಿಗೆ ಅಥವಾ ಅನುದಾನಗಳಿಗೆ ರಶೀದಿ ನೀಡಲಾಗುವುದೇ (ವಿವರ ನೀಡುವುದು);

ಆ) ಎಲ್ಲಾ ದೇವಾಲಯಗಳಲ್ಲಿ ದಾಸ್ತಾನು ವಹಿಯನ್ನು ನಿರ್ವಹಿಸಲಾಗಿದೆಯೇ?

ಇ) ಇಲ್ಲವಾದಲ್ಲಿ, ದಾಸ್ತಾನು ವಹಿಯನ್ನು ನಿರ್ವಹಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ? (ಮಾಹಿತಿ ನೀಡುವುದು)

ಉತ್ತರಗಳು:

ಅ) ಮುಜರಾಯಿ ಇಲಾಖೆಯ ಅಧಿನದಲ್ಲಿ ಬರುವ ಪ್ರವರ್ಗ 'ಎ' ಮತ್ತು 'ಬಿ' ದೇವಸ್ಥಾನಗಳಿಗೆ ದಾನಿಗಳು ವಸ್ತು ಅಥವಾ ನಗದು ರೂಪದಲ್ಲಿ ನೀಡುವ ದೇಣಿಗೆಗೆಮಾತ್ರ ರಶೀದಿಯನ್ನು ನೀಡಲಾಗುತ್ತಿದೆ.

ಆ) ಪ್ರವರ್ಗ 'ಎ' ಮತ್ತು 'ಬಿ' ಅಧಿಸೂಚಿತ ದೇವಸ್ಥಾನಗಳಲ್ಲಿ ದಾಸ್ತಾನು ವಹಿ ನಿರ್ವಹಿಸಲಾಗುತ್ತಿದೆ. ಇತರೆ ದೇವಸ್ಥಾನಗಳಿಗೆ ಹೆಚ್ಚಿನ ಬೆಲೆ ಬಾಳುವ ದೇಣಿಗೆ / ವಸ್ತು ನೀಡಿದಲ್ಲಿ ಅವುಗಳನ್ನು ವಹಿಯಲ್ಲಿ ನಮೂದಿಸಲಾಗುವುದು.

ಇ) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997)ರ ನಿಯಮಗಳ (2002) ನಿಯಮ 24 ರನ್ವಯ ನಮೂನೆ 2ನ್ನು ನಿಗದಿಪಡಿಸಿದ್ದು, ಇದರನ್ವಯ ದಾಸ್ತಾನು ವಹಿ ನಿಗದಿಪಡಿಸಿ ನಿಯಮಗಳನ್ನು ರೂಪಿಸಲಾಗಿದೆ.